OS No. 40/2022

PW-1

**(ಇಂದು ದಿಃ 07-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಮುಂದುವರೆದ ಪಾಟೀ ಸವಾಲುಃ- 4 ನೇ ಪ್ರತಿವಾದಿ ಪರ ಶ್ರೀ. VJM ವಕೀಲರಿಂದಃ-</u>**

1ನೇ ಪ್ರತಿವಾದಿ ತಾಯಿ ಮತ್ತು 1ನೇ ಪ್ರತಿವಾದಿ ಈ ಹಿಂದೆ ನನ್ನ ವಿರುದ್ದ ಅಸಲು ದವಾ ನಂಬಾರ 78/2001 ನ್ನು ಸಲ್ಲಿಸಿದ್ದರ ಎಂದರೆ ಸರಿ. ಸದರಿ ದಾವೆಯಲ್ಲಿ ಧೂಳಮ್ಮ ರವರು ಲಚಮಯ್ಯ ಬರೆದುಕೊಟ್ಟಿದ್ದ ಮರಣ ಶಾಸನ ಪತ್ರ ಹಾಜರಪಡಿಸಿದ್ದರು ಎಂದರೆ ಸರಿ. ಸದರಿ ಮರಣ ಶಾಸನ ಪತ್ರದಲ್ಲಿ ಲಚಮಯ್ಯ ಆತನಿಗೆ ಗಂಡು ಮಕ್ಕಳು ಇಲ್ಲ ಎಂದು ಹೇಳಿ ಬರೆಸಿದ್ದಾರೆ ಎಂದರೆ ಸರಿಯಲ್ಲ, ನಾನು ಧೂಳಮ್ಮ ಮತ್ತು ಚಿನ್ನಮ್ಮ ರವರಿಗೆ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ, ನಾನು ಲಚಮಯ್ಯ ಮಗ ಅಲ್ಲಾ ಎಂದರೆ ಸರಿಯಲ್ಲ, ನಾನು ಲಚಮಯ್ಯ ಮಗ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ, ದಾವಾ ಮನೆಯ ಕಿಮ್ಮತ್ತು ಹೇಳಲು ಆಗುವುದಿಲ್ಲ, 7ನೇಪ್ರತಿವಾದಿ ದಾವಾ ಸ್ವತ್ತಿನಲ್ಲಿ 3 ಅಂತಸ್ಥಿನ ಮನೆ ಕಟ್ಟಿದ್ದಾರೆ ಎಂದರೆ ಸರಿ. ಆ ಬಗ್ಗೆ ದಾವೆಯಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿ. ದಾವಾ ಆಸ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(6ನೇ ಪ್ರತಿವಾದಿ ಪರ ವಕೀಲರು ಸಮಯವಕಾಶ ಕೋರಿದ್ದು ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**